ಸ್ಪೀಕರ್ ಕಾಗೇರಿ ಪ್ರಮಾಣ ವಚನ ಬೋಧನೆ | ಶರತ್ ಬಚ್ಚೇಗೌಡರನ್ನು ಮಾತನಾಡಿಸದ ಸಿಎಂ | ರಿಜ್ವಾನ್, ಮಂಜುನಾಥ್ ಗೈರು

# ನೂತನ ಶಾಸಕರ ಪ್ರಮಾಣ ವಚನ ಸ್ವೀಕಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ ಶಾಸಕರು ಭಾನುವಾರ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಪ್ರಮಾಣವಚನ ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ವಿಶೇಶ್ವರ ಹೆಗಡೆ ಕಾಗೇರಿ ಅವರು ನೂತನ ಶಾಸಕರಿಗೆ ಗೌಪ್ಯತಾ ಪ್ರಮಾಣ ವಚನವನ್ನು ಬೋಧಿಸಿದರು. ಹುಣಸೂರಿನ ಎಚ್.ಪಿ ಮಂಜುನಾಥ್ ಹಾಗೂ ಶಿವಾಜಿನಗರದಿಂದ ಆಯ್ಕೆಯಾಗಿರುವ ರಿಜ್ವಾನ್ ಅರ್ಷದ್ ಕಾರ್ಯಕ್ರಮದಲ್ಲಿ ಪ್ರಮಾಣವಚನ ಸ್ವೀಕರಿಸಲಿಲ್ಲ.

ಶಾಸಕರ ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವರಾದ ಬಸವರಾಜ್ ಬೊಮ್ಮಾಯಿ, ಆರ್.ಅಶೋಕ, ಸುರೇಶ್‌ಕುಮಾರ್, ಎಚ್.ನಾಗೇಶ್ ಹಾಗೂ ನೂತನ ಶಾಸಕರು, ಸಂಬಂಧಿಕರು, ಸೇರಿದಂತೆ ಅಪಾರ ಸಂಖ್ಯೆಯ ಅಭಿಮಾನಿಗಳು ಪಾಲ್ಗೊಂಡಿದ್ದರು.





ಹೊಸಕೋಟೆ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಮತ್ತು ಗೋಕಾಕ ಶಾಸಕ ರಮೇಶ್ ಜಾರಕಿಹೊಳಿ ಅವರಿಗೆ ವಿಧಾನಸಭಾಧ್ಯಕ್ಷ ವಿಶೇಶ್ವರ ಹೆಗಡೆ ಕಾಗೇರಿ, ಪ್ರಮಾಣ ವಚನ ನೀಡಿ ಅಭಿನಂದಿಸಿದರು.

ರಾಣೆಬೆನ್ನೂರಿನ ಶಾಸಕ ಅರುಣ್ ಕುಮಾರ್ ಮನೆ ದೇವರಾದ ಕೊಟ್ಟೂರು ಬಸವೇಶ್ವರನ ಹೆಸರಲ್ಲಿ, ಹಿರೇಕೆರೂರಿನ ಬಿ.ಸಿ.ಪಾಟೀಲ್ ಬಸವಣ್ಣ, ಉಳಿದಂತೆ ಎಲ್ಲ ಶಾಸಕರು ಸತ್ಯ ಭಗವಂತ ಮತ್ತು ಸಂವಿಧಾನ ನಿಷ್ಠೆಯಡಿ ಕೆಲಸ ಮಾಡುವುದಾಗಿ ಪ್ರತಿಜ್ಞಾವಿಧಿ ಸ್ವೀಕರಿಸಿದರು. ಬಿ.ಸಿ. ಪಾಟೀಲ್ ರೇಷ್ಮೆ ಶಾಲು ಹೊದ್ದು ಮಿಂಚಿದರೆ, ಉಳಿದ ಶಾಸಕರು ಕೇಸರಿ ಶಾಲು ಧರಿಸಿದ್ದರು. ವಿಧಾನಸಭೆ ಕಾರ್ಯದರ್ಶಿ ವಿಶಾಲಾಕ್ಷಿ ಅವರು ಒಬ್ಬೊಬ್ಬರ ಹೆಸರು ಕರೆಯುತ್ತಿದ್ದಂತೆ ಅಲ್ಲಿ ನೆರೆದಿದ್ದ ಬೆಂಬಲಿಗರು ಜೈಕಾರ ಹಾಕಿ ಘೋಷಣೆ ಕೂಗಿದರು.

ಅದರಲ್ಲೂ ಹೊಸಕೋಟೆ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಹೆಸರು ಕರೆಯುತ್ತಿದ್ದಂತೆ ನೆರೆದಿದ್ದ ಭಾರಿ ಸಂಖ್ಯೆಯ ಕಾರ್ಯಕರ್ತರು ಭಾರಿ ಘೋಷಣೆ ಕೂಗಿದ್ದು ವಿಶೇಷವಾಗಿತ್ತು. ಕೆ.ಸಿ.ನಾರಾಯಣಗೌಡ ಮತ್ತು ಶ್ರೀಮಂತ ಪಾಟೀಲ್ ಪ್ರಮಾಣ ವಚನ ಸ್ವೀಕರಿಸುವ ವೇಳೆ ತಡವರಿಸಿದ್ದು ಕಂಡುಬಂತು.

## ಶರತ್ ಮೇಲೆ ಮುಂದುವರಿದ ಸಿಟ್ಟು

ಹೊಸಕೋಟೆ ಪಕ್ಷೇತರ ಶಾಸಕ ಶರತ್ ಬಚ್ಚೇಗೌಡ ಮುಖ್ಯಮಂತ್ರಿಯವರನ್ನು ಮಾತನಾಡಿಸಲು ಮುಂದಾದ ವೇಳೆ ನಿರಾಕರಿಸಿದ ಘಟನೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆಯಿತು. ಬೆಳಗ್ಗೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನೂತನ ಶಾಸಕರು ಅಧಿಕಾರ ಸ್ವೀಕಾರ ಸಮಾರಂಭ ಮುಗಿದ ಬಳಿಕ ಶರತ್ ಬಚ್ಚೇಗೌಡ, ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಮಾತನಾಡಿಸಲು ಮುಂದಾದರು. ಸಮಾರಂಭ ಮುಗಿದ ನಂತರ ಶರತ್ ಬಚ್ಚೇಗೌಡ ಗುಂಪಿನಲ್ಲಿದ್ದ ಸಿಎಂ ಅವರನ್ನು ಸೌಹಾರ್ದಯುತವಾಗಿ ಮಾತನಾಡಿಸಲು ಮುಂದೆ ಬಂದಾಗ ಯಡಿಯೂರಪ್ಪ ನೋಡಿಯೂ ನೋಡದಂತೆ ವರ್ತಿಸಿದ್ದಾರೆ. ಇದರಿಂದ ಮುಜುಗರಕ್ಕೊಳಗಾದ ಬಚ್ಚೇಗೌಡ ತಕ್ಷಣವೇ ಹಿಂದೆ ಸರಿದರು. ಕಂದಾಯ ಸಚಿವ ಆರ್.ಅಶೋಕ್ ಅವರನ್ನು ಮಾತನಾಡಿಸಲು ಮುಂದಾದರಾದರೂ ಅವರೂ ಸಹ ಕಂಡು ಕಾಣದಂತೆ ವರ್ತಿಸಿದರು. ಇದಕ್ಕೂ ಮೊದಲು ಶರತ್ ಬಚ್ಚೇಗೌಡ ಬಿಜೆಪಿ ಶಾಸಕರ ಜತೆ ವೇದಿಕೆಯಲ್ಲಿ ಫೋಟೋ ತೆಗೆಸಿಕೊಳ್ಳಲು ನಿರಾಕರಿಸಿದರು. ಶಿಷ್ಟಾಚಾರ ಪಾಲನೆ ಮಾಡಬೇಕೆಂದು ವಿಧಾನಸಭೆಯ ಸ್ಪೀಕರ್ ಕಚೇರಿ ಸಿಬ್ಬಂದಿ ಹೇಳಿದ ಬಳಿಕ ಫೋಟೊ ತೆಗೆಸಿಕೊಂಡರು.